# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : 363 (2745) |
| **ಸದಸ್ಯರ ಹೆಸರು** | : ಶ್ರೀ ಕೆ. ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | : ದಿನಾಂಕ:28.03.2022 |
| **ಉತ್ತರಿಸುವ ಸಚಿವರು** | : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ "ಮಕ್ಕಳ ಮನೆ" ತರಗತಿಗಳನ್ನು ಯಾವಾಗ ಪ್ರಾರಂಭಿಸಲಾಯಿತು; ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಗೌರವ ಶಿಕ್ಷಕರ ಸಂಖ್ಯೆ ಎಷ್ಟು; (ವಿವರ ನೀಡುವುದು) | ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1ನೇ ತರಗತಿ ವಿದ್ಯಾರ್ಥಿಗಳ ಹಾಜರಾತಿಯನ್ನು ಅಭಿವೃದ್ಧಿ ಪಡಿಸಲು ಸ್ವ-ಇಚ್ಛೆಯಿಂದ ಪ್ರಥಮ ಬಾರಿಗೆ ಮಂಡ್ಯ ಜಿಲ್ಲೆಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ "ಮಕ್ಕಳ ಮನೆ" (ಎಲ್.ಕೆ.ಜಿ. ಮತ್ತು ಯು.ಕೆ.ಜಿ) ತರಗತಿಗಳನ್ನು ಎಸ್.ಡಿ.ಎಂ.ಸಿ. ಯಿಂದ 2016-17ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ.<br><br>**ಗೌರವ ಶಿಕ್ಷಕರ ಸಂಖ್ಯೆ:**<br><br>ಕ್ರ. ಸಂ / ವರ್ಷ / ಗೌರವ ಶಿಕ್ಷಕರ ಸಂಖ್ಯೆ<br>01 / 2016-17 / 59<br>02 / 2017-18 / 82<br>03 / 2018-19 / 204<br>04 / 2019-20 / 292<br>05 / 2020-21 / 252 |
| ಆ) | ಈ ಶಿಕ್ಷಕರು ಗುಣಾತ್ಮಕ ಶಿಕ್ಷಣ ನೀಡಿ ಶಾಲೆಗಳ ಸಬಲೀಕರಣಕ್ಕೆ ಪ್ರಮುಖ ಪಾತ್ರವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಇ) | ಬಂದಿದ್ದಲ್ಲಿ, ಈ ಗೌರವ ಶಿಕ್ಷಕರ ಸೇವೆಯನ್ನು ಮುಂದುವರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | • ಇದೊಂದು ಸ್ವಯಂಪ್ರೇರಿತ ಕಾರ್ಯಕ್ರಮವಾಗಿದೆ. ಈ ಗೌರವ ಶಿಕ್ಷಕರು ಗುಣಾತ್ಮಕ ಶಿಕ್ಷಣವನ್ನು ನೀಡಲು ಸಹಾಯವಾಗುವಂತೆ ಜಿಲ್ಲಾ ತರಬೇತಿ ಸಂಸ್ಥೆಯಿಂದ 5–6 ದಿನಗಳ ತರಬೇತಿಯನ್ನು ಉಚಿತವಾಗಿ ನೀಡಲಾಗಿದೆ.<br>• ಸದರಿ ಶಿಕ್ಷಕರಿಗೆ ಸ್ಥಳೀಯ ದಾನಿಗಳು / ಪೋಷಕರ ಸಹಾಯ ಧನದಿಂದ ಗೌರವ ಸಂಭಾವನೆಯನ್ನು ಎಸ್.ಡಿ.ಎಂ.ಸಿ. ಯವರು ನೀಡುತ್ತಿದ್ದಾರೆ.<br>• ಮೇಲ್ಕಂಡ ಕ್ರಮಗಳನ್ನು ಹೊರತುಪಡಿಸಿ, ಗೌರವ ಶಿಕ್ಷಕರ ಸೇವೆಯನ್ನು ಮುಂದುವರೆಸಲು ಇದು ಸರ್ಕಾರದಿಂದ ಮಂಜೂರಾದ ಕಾರ್ಯಕ್ರಮವಾಗಿರುವುದಿಲ್ಲ. ಇದು ಸ್ಥಳೀಯವಾಗಿ ಎಸ್.ಡಿ.ಎಂ.ಸಿ. ನೇತೃತ್ವದ ಖಾಸಗಿ ಕಾರ್ಯಕ್ರಮವಾಗಿರುತ್ತದೆ. |

ಸಂಖ್ಯೆ: ಇಪಿ 42 ಪಿಎಂಎ 2021

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ
ಹಾಗೂ ಸಕಾಲ ಸಚಿವರು